.



ದಿನಾಂಕ 21-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಜಿ.ಎ ವಕೀಲರವರಿಂದಃ

ಭಾಗಾಂಶ ಕೋರಿ ಕೇಸು ದಾಖಲೆ ಮಾಡಿದ್ದೇನೆ. ಈ ಕೇಸಿಗೆ ಮಾಹಿತಿ ಮತ್ತು ದಾಖಲೆಗಳನ್ನು ನಾನೇ ನೀಡಿದ್ದೆ. ಈ ಕೇಸಿನಲ್ಲಿ ಏನು ಕಾಣಿಸಿದ್ದಾರೆ ಎಂಬ ಬಗ್ಗೆ ನಾನು ಸಂಪೂರ್ಣ ತಿಳಿದುಕೊಂಡಿದ್ದೇನೆ. 3 ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಬೆಳ್ಳಂಪಳ್ಳಿಯಲ್ಲಿವೆ. ದಾವಾ ಸ್ವತ್ತುಗಳ ಬಳಿ ಮಣಿಪಾಲದ ಮೂಖೇನ ಹೋಗಬೇಕಾದರೆ ನದಿ ದಾಟಿ ಹೋಗಬೇಕಾಗುತ್ತದೆ ಇಲ್ಲವಾದಲ್ಲಿ ಬ್ರಹ್ಮಾವರದಿಂದ ಹೋಗಬಹುದು. ಮಣಿಪಾಲದಿಂದ ಬೆಳ್ಳಂಪಳ್ಳಿಯಲ್ಲಿಗೆ ಹೋಗಲು ಇತ್ತೀಚೆಗೆ ಸೇತುವೆ ಮಾಡಿರುತ್ತಾರೆ. ಸೇತುವೆ ಆದ ನಂತರ ಮಣಿಪಾಲದ ಆಚೆಗೆ ಬೆಳ್ಳಂಪಳ್ಳಿಯಲ್ಲಿ ಸ್ವತ್ತನ್ನು ಖರೀದಿ ಮಾಡುವ ಸಂಖ್ಯೆ ಹೆಚ್ಚಾಗಿದೆ. ಬೆಳ್ಳಂಪಳ್ಳಿಯ ಸೇತುವೆ ನಂತರ ಪಕ್ಕದಲ್ಲೇ ರೆಸಾರ್ಟ್ ಹೊಸದಾಗಿ ನಿರ್ಮಾಣ ಗೊಂಡಿರುತ್ತದೆ. ಸದ್ರಿ ರೆಸಾರ್ಟ್ ಈಜು ಕೊಳ ಇರುವ ದೊಡ್ಡ ರೆಸಾರ್ಟ್. ಸದ್ರಿ ರೆಸಾರ್ಟ್ ಅಲ್ಲಿ ನಿರ್ಮಾಣ ವಾದ ಕಾರಣ ಆಸ್ತಿ ಬಲೆ ಏರಿದೆ. ಸದ್ರಿ ರೆಸಾರ್ಟ್ ರವರಿಗೆ ನಮಗೆ ಸೇರಿದ ಯಾವುದೇ ಜಾಗ ಮಾರಾಟ ಮಾಡಿಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಜಾಗ ಸದ್ರಿ ರೆಸಾರ್ಟ್ ರವರಿಗೆ ಮಾರಾಟ ಮಾಡುವ ಸಂಬಂಧ ನಾವು ಒಪ್ಪಿಲ್ಲ ಮತ್ತು ಯಾವುದೇ ಹಣ ತೆಗೆದುಕೊಂಡಿಲ್ಲ. ನನಗೆ ಸಂಬಂದಿಸಿದ ಬ್ಯಾಂಕ್ ಪಾಸ್ ಪುಸ್ತಕ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಜಾಗದ ಬೆಲೆ ಏರಿಕೆ ಆದ ಕಾರಣ ನಾನು ಈ ದಾವೆ ಸಲ್ಲಿಸಿದ್ದು ಎಂದರೆ ಸರಿ.

ನನ್ನ ತಂದೆ ಶೀನಾ ಶೆಟ್ಟಿ ತಾಯಿ ಮೆಣಕು ಶೆಟ್ಟಿ. ನನ್ನ ತಂದೆ ಶೀನಾ ಶೆಟ್ಟಿಯವರು ಮೂಲತಃ ಬೆಳ್ಳಂಪಳ್ಳಿಯವರು. ದಾವಾ ಸ್ವತ್ತಿನಂಲ್ಲೇ ನನ್ನ ತಂದೆ ಇದ್ದರು. ನನ್ನ ತಾಯಿ ಸಹ ಬೆಳ್ಳಂಪಳ್ಳಿಯಲ್ಲೇ ಇದ್ದದ್ದು. ನನ್ನ ತಾಯಿ ತವರು ಮನೆ ಮತ್ತು ನನ್ನ ಗಂಡನ ಮನೆ ಎರಡೂ ತಾಯಿ ಮನೆ. ನನ್ನ ತಾಯಿ ಮದುವೆಯಾದ ನಂತರ ದಾವಾ ಸ್ವತ್ತಿಗೆ ಬಂದಿದ್ದು. ನನ್ನ ಪ್ರಕಾರ ಈ ದಾವಾ ಆಸ್ತಿಗಳು ನನ್ನ ತಾಯಿಗೆ ಸೇರಿದ್ದು. ನನ್ನ ತಾಯಿ ಮದುವೆಯಾದ ಕಾರಣ ದಾವಾ ಸ್ವತ್ತುಗಳು ನನ್ನ ತಾಯಿಗೆ ಸೇರಿದ್ದು ಎಂದು ಹೇಳುತ್ತಿರುವುದು.

ದಾವಾ ಸ್ವತ್ತು ನನ್ನ ತಾಯಿ ಮದುವೆಯಾಗಿ ಬರುವ ಕಾಲಕ್ಕೆ ಯಾವ ಆಧಾರದ ಮೇಲೆ ನನ್ನ ತಂದೆ ದಾವಾ ಸ್ವತ್ತನ್ನು ಹೊಂದಿದ್ದರು ನನಗೆ ಗೊತ್ತಿಲ್ಲ ಕಾರಣ ನಾನು ಸಣ್ಣವಳು. ದಾವಾ ಸ್ವತ್ತು ನನ್ನ ತಂದೆಗೆ ಹೇಗೆ ಸೇರಿತ್ತು ಎಂದು ನಾನು ನನ್ನ ತಂದೆಯನ್ನು ಕೇಳಿಲ್ಲ ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ಹೊಂದುವ ಪೂರ್ವದಲ್ಲಿ ಯಾರು ಯಾವ ನೆಲೆಯಲ್ಲಿ ಹೊಂದಿದ್ದರು ನನಗೆ ಗೊತ್ತಿಲ್ಲ. ನನ್ನ ತಂದೆಗೆ ದಾವಾ ಸ್ವತ್ತು ಹೇಗೆ ಬಂತು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಗೋಪಾಲ ಶೆಟ್ಟಿರಿಗೆ ಕುಟುಂಬಾರ್ಥದಿಂದ ಬಂದಿದ್ದು. ಗೋಪಾಲಶೆಟ್ಟಿರಿಗೆ ಕುಟುಂಬಾರ್ಥ ಕ್ಕೆ ಯಾವ ರೀತಿ ಬಂತು ಎಂದರೆ ಸಾಕ್ಷಿ ಡಿಕ್ಲರೇಶನ್ ಮುಖೇನ ನೀಡಿದ್ದು ಆ ಸಂಬಂದ ಬಂತು. ಗೋಪಾಲ ಶೆಟ್ಟಿ ಡಿಕ್ಲರೇಶನ್ ಅಳಿಯ ಸಂತಾನ ಕಟ್ಟಿನಡಿ ಕೊಟ್ಟಿದ್ದು . ದಾವಾ ಸ್ವತ್ತು ಅಳಿಯ ಸಂತಾನ ಕಟ್ಟಿನಲ್ಲಿ ಇತ್ತು ಎಂದು ತೋರಿಸಲು ದಾಖಲೆ ಇದೆ ದಾಖಲೆ ಎಂದರೆ ಫೈಲು. ಸದ್ರಿ ಫೈಲು ವಕೀಲರಿಗೆ ನೀಡಿರುತ್ತೇನೆ. ಸದ್ರಿ ಫೈಲನ್ನು ಹಾಜರುಮಾಡಲು ನನಗಾಗಲೀ ವಕೀಲರಿಗಾಗಲೀ ಸಮಸ್ಯೆ ಇತ್ತಾ ಎಂದರೆ ಸಾಕ್ಷಿ ನನಗೆ ಸಮಸ್ಯೆ ಇದ್ದ ಕಾರಣ ವಕೀಲರಿಗೆ ನೀಡಿದ್ದು ಎಂದು ನುಡಿಯುತ್ತಾರೆ. ಸದ್ರಿ ಫೈಲು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಪಾಲು ಬೇಕಿತ್ತು ಕಾರಣ ಹಾಜರುಮಾಡಿಲ್ಲ ಎಂದು ನುಡಿಯುತ್ತಾರೆ.

ಚಾಲಗೇಣಿ ಬಗ್ಗೆ ನನಗೆ ಗೊತ್ತಿಲ್ಲ. ಗೇಣಿ ಬಗ್ಗೆ ನನಗೆ ಗೊತ್ತು. ಹಾಲೀ ನಾನು ಯಾವುದೇ ಗೇಣಿ ವಹಿಸಿಕೊಂಡಿಲ್ಲ. ನನ್ನ ತಂದೆ ಸಹ ಗೇಣಿ ವಹಿಸಿಕೊಂಡಿಲ್ಲ. ನನ್ನ ತಾಯಿ ಸಹ ಗೇಣಿ ವಹಿಸಿಕೊಂಡಿಲ್ಲ. ಗೇಣಿ ವಹಿಸಿಕೊಂಡಿದ್ದು ಗೋಪಾಲಶೆಟ್ಟರು. ಸಾಕ್ಷಿ ಪುನಃ ನನ್ನ ಅಮ್ಮ ಮೆಣಕು ಶೆಟ್ಟಿ ವಹಿಸಿಕೊಂಡಿದ್ದು ಎಂದು ನುಡಿಯುತ್ತಾರೆ. ನನ್ನ ತಾಯಿ ಮೆಣಕು ಶೆಟ್ಟಿ ಗೇಣಿ ವಹಿಸಿಕೊಂಡಿದ್ದರು ಎಂದು ತೋರಿಸಲು ದಾಖಲೆ ಇಲ್ಲ. ನನ್ನ ತಂದೆ ಗೇಣಿ ವಹಿಸಿಕೊಂಡಿದ್ದರು ಎಂದು ತೋರಿಸಲು ದಾಖಲೆ ಇಲ್ಲ. ನನ್ನ ತಂದೆ ಮತ್ತು ತಾಯಿ ಗೇಣಿ ಸಂಬಂಧ ಧಣಿಗಳಿಗೆ ಗೇಣಿ ನೀಡುತ್ತಿದ್ದರು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಆರ್ ಟಿ ಸಿ ಇದೆ ಎಂದು ನುಡಿಯುತ್ತಾರೆ. ಗೇಣಿಯನ್ನು ನನ್ನ ತಂದೆ ಯಾರಿಗೆ ಕೊಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ಮುಡಿ ಲೆಕ್ಕದಲ್ಲಿ ನೀಡುತ್ತಿದ್ದರು ಆದರೆ ಎಷ್ಟು ಮುಡಿ ನನಗೆ ಗೊತ್ತಿಲ್ಲ. ಹೇಗೆ ಗೇಣಿ ಕೊಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಅಸ್ತಿಯಿಂದ ಉತ್ಪತ್ತಿ

ಎಷ್ಟು ಬರುತ್ತಿತ್ತು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಿಂದ ಉತ್ಪತ್ತಿ ನಮ್ಮ ಮನೆ ಊಟಕ್ಕೆ ಸಾಕಾಗುತ್ತಿತ್ತು.

ಗೋಪಾಲಶೆಟ್ಟಿ, ಭೋಜ ಶೆಟ್ಟಿ, ಶಂಕರ ಶೆಟ್ಟಿ, ರಾಜುಶೆಟ್ಟಿ, ಜಲಜ ಶೆಟ್ಟಿ, ಸುಶೀಲ ಮತ್ತು ನಾನು ಒಟ್ಟು 7 ಜನ ನನ್ನ ತಂದೆ ತಾಯಿಗೆ ಮಕ್ಕಳು. ನಾವು 7 ಜನ ಮಕ್ಕಳು ಬೆಳ್ಳಂಪಳ್ಳಿ ಯಲ್ಲಿ ಜನಿಸಿದ್ದು. ಜಲಜ ಶೆಟ್ಟಿಗೆ ಮದುವೆ ಬೆಳ್ಳಂಪಳ್ಳಿ ಯಲ್ಲಿ ಆಗಿದ್ದು ನಾನು ಆಕೆಯ ಮದುವೆಯಲ್ಲಿ ಬಹಳ ಚಿಕ್ಕವಳಿದ್ದೆ. ನನಗೆ ಹಾಲೀ 65 ವರ್ಷ ವಯಸ್ಸು. 1956 ರಲ್ಲಿ ನಾನು ಜನಿಸಿರಬಹುದು. 1956 ನನ್ನ ಜನ್ಮ ಇಸವಿ ತೋರಿಸುವ ಬಗ್ಗೆ ದಾಖಲೆ ಇಲ್ಲ. 1956 ರ ಪೂರ್ವದಲ್ಲೇ ನನ್ನ ಅಕ್ಕನ ಮದುವೆ ಯಾಗಿತ್ತು. ಹಾಲೀ ನನ್ನ ಅಕ್ಕ ಮದುವೆಯ ನಂತರ ಪೂನಾ ದಲ್ಲಿ ವಾಸ. ನನ್ನ ಅಕ್ಕ ಸುಶೀಲ ಮದುವೆ ಯಾವಾಗ ಆಗಿದ್ದು ನನಗೆ ಗೊತ್ತಿಲ್ಲ. ಆಕೆ ದಾವಾ ಆಸ್ತಿಯಲ್ಲೇ ವಾಸ. ನನ್ನ ಮದುವೆಯಾಗಿ ಅಂದಾಜು 25 ವರ್ಷ ಮೇಲ್ಪಟ್ಟಿರಬಹುದು ನನ್ನ ಮದುವೆಯಾಗುವ ಕಾಲಕ್ಕೆ 19-20 ವರ್ಷ ವಯಸ್ಸು. ನನ್ನ ಮದುವೆಯಾದಾಗಿನಿಂದ ನಾನು ಪೆರ್ಡೂರಿನ ಗಂಡನ ಮನೆಯಲ್ಲಿ ವಾಸ ಎಂದರೆ ಸರಿಯಲ್ಲ, ಸಾಕ್ಷಿ ಬೆಳ್ಳಂಪಳ್ಳಿ ಯಲ್ಲಿ ವಾಸ ಎಂದು ನುಡಿಯುತ್ತಾರೆ. ನನ್ನ ಗಂಡನ ಮರಣ ನಂತರ ನಾನು ಪೆರ್ಡೂರಿನಿಂದ ಬೆಳ್ಳಂಪಳ್ಳಿ ಗೆ 4 ವರ್ಷದ ಹಿಂದೆ ಬಂದೆ. ಈ ದಾವೆ ಹಾಕುವ ಕಾಲಕ್ಕೆ ನಾನು ಪೆರ್ಡೂರಿನಲ್ಲಿ ವಾಸ ಇದ್ದೆ. ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.